# ಹಸಿವು



ಹನುಮಂತ ಹಾಲಿಗೇರಿ
ಕಲೆ: ಬಾದಲ್ ನಂಜುಂಡಸ್ವಾಮಿ

ಸರಿರಾತ್ರಿಯಾಗಲು ತಾಸೊತ್ತು ಬಾಕಿಯಿತ್ತು. ತಲೆ ಮೇಲಿನಿಂದ ಜಿಟಿಜಿಟಿ ಅಂತ ಮಳೆ ಸುರಿಯುತ್ತಿದ್ದರೆ, ಕೆಳಗಡೆಯಿಂದ ಚಪ್ಪಲಿಗಳು ರಸ್ತೆ ಮೇಲಿನ ಹೊಲಸು ತಂದು ಕುಂಡಿಗೆ ಎಸೆಯುತ್ತಿದ್ದವು. ನಾನು ಮತ್ತು ಪ್ರೊ. ಜೋಳದಗೌಡರು ಮೆಜೆಸ್ಟಿಕ್ಕಿನ ಮೇಲ್ಸೇತುವೆಯ ಮೇಲೆ ಲಗುಬಗೆಯಿಂದ ಅಮರ್ ಹೊಟೇಲ್ ಕಡೆ ನಡೆದಿದ್ದೆವು. ಮೆಜೆಸ್ಟಿಕ್ ಎಂಬುದು ನನಗೆ ಥೇಟ್ ಇರುವೆ ಹುತ್ತದಂತೆ ಗೋಚರವಾಗತೊಡಗಿತ್ತು. ಥೇಟ್ ಇರುವೆಗಳಂತೆಯೇ ಕಾಣುತ್ತಿದ್ದ ಬಸ್ಸುಗಳು ತಮ್ಮ ಬೆಳಕಿನ ಕೋಲಿನಂಥ ಮೀಸೆಯನ್ನು ಇಕ್ಕೆಲಗಳಲ್ಲಿ ಚೆಲ್ಲುತ್ತಾ ಹುತ್ತದೊಳಗೆ ಹೊಕ್ಕುವುದು ಹೊರಬರುವುದು ಮಾಡುತ್ತಿದ್ದವು. ಮೇಲ್ಸೇತುವೆಯಿಂದ ಕೆಳಗಿಳಿಯುತ್ತಿದ್ದಂತೆಯೇ ಎದುರಿಂದ ಬಂದ ಬಸ್ಸೊಂದು ರಸ್ತೆಗುಂಡಿಯಲ್ಲಿನ ರಾಡಿ ನೀರನ್ನು ನಮ್ಮಗಳ ಮುಖಮೂತಿಯೆನ್ನದೇ ಫಳಾರ್ ಅಂತ ಸಿಡಿಸಿ ನಿರ್ಲಿಪ್ತವಾಗಿ ಮಾಯವಾಯಿತು. ಆ ರಸ್ತೆಯ ಅಂಡರ್‌ಪಾಸ್ ಮುಂದೆ ನಾಯಿಯೊಂದು ಬೆದೆಯಲ್ಲಿದ್ದ ಹೆಣ್ಣಾಯಿಯೊಂದಿಗೆ ತಳುಕುಬಳಕು ಹಾಕ್ಕೊಂಡಿದ್ದರೆ ಇನ್ನೊಂದೆರಡು ಬೀದಿನಾಯಿಗಳು ತಮ್ಮ ಮುಂದೆ ನಡೆಯುತ್ತಿದ್ದ ಆ ರತಿಕ್ರೀಡೆಯನ್ನು ಸಹಿಸಿಕೊಳ್ಳಲಿಕ್ಕಾಗದೇ ಆಕಾಶಮುಖಿಯಾಗಿ ಕುಂಯ್ಯೋ ಕುಂಯ್ಯೋ ಎನ್ನುತ್ತಿದ್ದವು. ಅದೇ ಅಂಡರಪಾಸಿನೊಳಗಡೆ ಮಲ್ಲಿಗೆ ಮುಡಿದಿದ್ದ ಹೆಣ್ಣಿನ ನೆರಳೊಂದು ಗಂಡಿನ ನೆರಳೊಂದಿಗೆ ವ್ಯವಹಾರ ಕುದುರಿಸುತ್ತಿದ್ದರೆ, ಅಂಡರ್‌ಪಾಸಿನ ಆ ಕಡೆಯಲ್ಲಿದ್ದ ನಾಲ್ಕಾರು ಪಡ್ಡೆ ಹೈಕಳುಗಳು ಆಸೆಯಿಂದ ಆ ನೆರಳುಗಳನ್ನೇ ನೋಡುತ್ತಾ ಮತ್ತೆ ಖಾಲಿಜೇಬುಗಳನ್ನು ಶಪಿಸಿಕೊಳ್ಳುತ್ತಾ ನಿಂತುಕೊಂಡಿದ್ದರು.

ಜನರು ಸಾಗರೋಪಾದಿಯಲ್ಲಿ ಹಿಂದಿನಿಂದ ಮುಂದಿನಿಂದ, ಆ ಕಡೆಯಿಂದ ಈ ಕಡೆಯಿಂದ ಬುದು ಬುದು ಓಡಾಡುತ್ತ, ಫೋನಿನಲ್ಲಿ ಯಾರೊಂದಿಗೋ ಅಕ್ಕ, ಅವ್ವ, ಅಜ್ಜ ಅಂತೆಲ್ಲ ಬೈಯುತ್ತಾ ನಗಾಡುತ್ತಾ ಹಲ್ಕಿರಿಯುತ್ತಾ ಪಿಚಕ್ಕೆಂದು ಉಗುಳುತ್ತಾ, ಆ ಹೊಂಬೆಳಕಿನ ನಸುಗತ್ತಲಿನಲ್ಲಿ ಇನ್ನೆತ್ತಲೋ ಮಾಯವಾಗಿ ಬಿಡುತ್ತಿದ್ದರು. ಜಿಟಿ ಮಳೆಯನ್ನೇ 'ಏಸಿ' ಎಂದು ಬಗೆದವರಂತೆ ಪೇಪರ್ರು, ಪ್ಲಾಸ್ಟಿಕ್ ಚೀಲಗಳನ್ನು ಮುಖದ ಮೇಲೆ ಒಗೆದುಕೊಂಡು ಅಲ್ಲಲ್ಲಿ ಒಂದಿಷ್ಟು ಜನ ಆರಾಮಾಗಿ ನಿದ್ರಿಸುತ್ತಿದ್ದರೆ, ನಾಯಿಕುನ್ನಿಯೊಂದು ಹಾಗೆ ಮಲಗಿದವರನ್ನು ಮೂಸಿ ನೋಡಿ, ಕಾಲೆತ್ತಿ ಒಂದಾ ಮಾಡಲು ಧೈರ್ಯವಿಲ್ಲದೆ ಕುಂಯ್ಯಿ ಕುಂಯ್ಯಿ ಎನ್ನುತ್ತಿತ್ತು. ಬೆಳಗಾವಿ, ಹುಬ್ಬಳ್ಳಿ, ಹಾಸನ, ಮಂಗಳೂರು ಅಂತ ತರಾವರಿ ಊರುಗಳ ಹೆಸರುಗಳನ್ನು ಕೂಗುತ್ತಾ ಬರುವವರನ್ನೆಲ್ಲ ಆಸೆಯಿಂದ ನೋಡುತ್ತಾ ಟ್ರಾವೆಲ್ಸ್ ಏಜೆಂಟ್‌ಗಳು ಇವರ ಕಣ್ಣಿಗೆ ಢಿಕ್ಕಿ ಹೊಡೆದು ರೆಸ್ಪಾನ್ಸ್ ಗಿಟ್ಟಿಸಿಕೊಳ್ಳಲಾಗದೇ ಬೇರೆ ಕಸ್ಟಮರ್ಸ್‌ಗಳತ್ತ ಕಣ್ಣು ನೆಟ್ಟರು.

ಪ್ರೊ. ರಾಮೇಗೌಡರು ನಾಳೆಯೇ ಧಾರವಾಡದಲ್ಲಿ ನಡೆಯಲಿರುವ ವಿಚಾರ ಸಂಕಿರಣದಲ್ಲಿ 'ಹಸಿವು: ಆಧುನಿಕೋತ್ತರ ಮೀಮಾಂಸೆ' ವಿಷಯದ ಮೇಲೆ ಪ್ರಬಂಧ ಮಂಡಿಸುವವರಿದ್ದರು. ನಾನು ಮಧ್ಯಾಹ್ನದ ನಂತರ ನಡೆಯಲಿರುವ ಕವಿಗೋಷ್ಠಿಯಲ್ಲಿ ಕವಿತೆ ಓದುವವನಿದ್ದೆ. ನಾನು ಪ್ರೊಫೆಸರ್ ಶಿಷ್ಯನಾಗಿದ್ದರಿಂದ ನಾವಿಬ್ಬರೂ ಒಂದೇ ಬಸ್ಸಿನಲ್ಲಿ ಹೋಗುವುದೆಂದು ಮೊದಲೇ ತೀರ್ಮಾನಿಸಿ ಪ್ರೈವೇಟ್ ಬಸ್ ಬುಕ್ ಮಾಡಿದ್ದೆವು. ಮೆಜೆಸ್ಟಿಕ್ ಸುತ್ತಮುತ್ತ ಬದುಕು ಕಂಡುಕೊಂಡಿದ್ದ ಸೂಳೆಯರು, ಪಿಂಪ್‌ಗಳು, ಹೂ ಮಾರೋರು, ಚಿತ್ರಾನ್ನ–ಎಗ್‌ರೈಸ್ ಮಾರೋರು, ಪಿಕ್ ಪಾಕೆಟರ್‌ಗಳು, ಆಟೋವಾಲಾಗಳು, ಲಾಡ್ಜ್ ಹುಡುಗರು, ಇವರೆಲ್ಲರಿಂದ ಹಫ್ತಾ ಕೀಳುವ ಪೊಲೀಸರು, ಟೋಪಿ ಮಾರೋರು, ಟೋಪಿ ಹಾಕೋರು... 'ಎಷ್ಟೊಂದು ಜನ ಇಲ್ಲಿ ಹಸಿವು ನೀಗಿಸಿಕೊಳ್ಳಲು ದಾರಿ ಕಂಡ್ಕೊಂಡಿದ್ದಾರೆ ನೋಡಿ ಸರ್' ಅಂತ ನಾನು ಪ್ರೊಫೆಸರ್ ಮುಖ ನೋಡಿದೆ.

'ಇವ್ರೆಲ್ಲ ಬೇವರ್ಸಿ ಮಕ್ಕಳು ಕಣ್ರಿ. ತಣ್ಣಗೆ ತಮ್ಮೂರುಗಳಲ್ಲಿ ದುಡ್ಕೊಂಡು ತಿನ್ನೋದು ಬಿಟ್ಟು ಈ ಮೆಜೆಸ್ಟಿಕ್ ಸುತ್ತಮುತ್ತ ಅಡ್ಡಕಸಬಿ ಕೆಲಸ ಮಾಡ್ತಾವ್ರೆ. ನಿಮಗೆ ಗೊತ್ತಾ? ಈ ಗಿಜಿಗಿಜಿಗುಡುವ ಮೆಜೆಸ್ಟಿಕ್‌ನಂಥ ಪ್ರದೇಶಗಳು ಬೆಂಗಳೂರು ಎಂಬ ಸುಂದರಿಯ ಮೇಲಿರುವ ಅಸಹ್ಯ ಹುಣ್ಣುಗಳಂತೆ. ಈ ತಿರುಬೋಕಿಗಳೆಲ್ಲ ಇರದಿದ್ರೆ ಬೆಂಗಳೂರು